# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು | : | ಡಾ: ತೇಜಸ್ವಿನಿ ಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1342 |
| ಉತ್ತರಿಸಬೇಕಾದ ದಿನಾಂಕ | : | 21.12.2018 |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿರುವ ಸಹಕಾರಿ ಬ್ಯಾಂಕುಗಳಲ್ಲಿ ರೈತರು ಪಡೆದಿರುವ ಸಾಲ ಮೊತ್ತವೆಷ್ಟು? ಸಾಲದ ಮರುಪಾವತಿ ಕಳೆದ ಐದು ವರ್ಷಗಳಲ್ಲಿ ಯಾವ ರೀತಿ ಇದೆ: (ಪಡೆದಿರುವ ಸಾಲಗಳ ವಿವಿದ್ದೋದ್ದೇಶಗಳ ಮಾಹಿತಿ ಒದಗಿಸುವುದು)</td><td>ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕುಗಳಿಂದ 2018-19ನೇ ಸಾಲಿನಲ್ಲಿ (01.01.2018 ರಿಂದ 30.11.2018ರವರೆಗೆ) ರೈತರು ವಿವಿಧ ಉದ್ದೇಶಗಳಿಗೆ ಪಡೆದ ಸಾಲದ ವಿವರ ಈ ಕೆಳಗಿನಂತಿದೆ.<br>(ರೂ.ಕೋಟಿಗಳಲ್ಲಿ)
<table>
<tr><th>ವಿವರ</th><th>ಸಂಖ್ಯೆ</th><th>ಮೊತ್ತ</th></tr>
<tr><td>ಅಲ್ಪಾವಧಿ ಕೃಷಿ ಸಾಲ</td><td>1223985</td><td>6799.21</td></tr>
<tr><td>ಮಧ್ಯಮಾವಧಿ ಕೃಷಿ ಸಾಲ</td><td>15563</td><td>319.70</td></tr>
<tr><td>ಒಟ್ಟು</td><td>1239548</td><td>7118.91</td></tr>
</table>
ಕಳೆದ ಐದು ವರ್ಷಗಳಿಂದ ಸಾಲದ ಮರುಪಾವತಿ ಶೇಕಡವಾರು ವಿವರವನ್ನು ಈ ಕೆಳಗೆ ನೀಡಲಾಗಿದೆ.
<table>
<tr><th>ವರ್ಷ</th><th>ಅಲ್ಪಾವಧಿ ಕೃಷಿ ಸಾಲ (ಶೇ)</th><th>ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲ (ಶೇ)</th></tr>
<tr><td>2013-14</td><td>95.26</td><td>82.42</td></tr>
<tr><td>2014-15</td><td>92.86</td><td>73.24</td></tr>
<tr><td>2015-16</td><td>97.48</td><td>93.45</td></tr>
<tr><td>2016-17</td><td>97.50</td><td>69.28</td></tr>
<tr><td>2017-18</td><td>88.10</td><td>84.87</td></tr>
</table></td></tr>
<tr><td>ಆ)</td><td>ಸಾಲ ಮರುಪಾವತಿ ಮಾಡದಿರಲು ಯಾವ ಪ್ರಮುಖ ಕಾರಣಗಳು ರೈತರಿಂದ ಕಂಡುಬಂದಿದೆ: ಬ್ಯಾಂಕುಗಳ ಆರ್ಥಿಕ ಸ್ಥಿತಿ ಹೇಗಿದೆ?</td><td>ಸಾಲ ಮರುಪಾವತಿ ಉತ್ತಮವಾಗಿದ್ದು, 2017-18ನೇ ಸಾಲಿನಲ್ಲಿ ಎಲ್ಲಾ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳು ಲಾಭ ಪಡೆದಿರುತ್ತವೆ.</td></tr>
<tr><td>ಇ)</td><td>ಸಮ್ಮಿಶ್ರ ಸರ್ಕಾರ ಘೋಷಿಸಿರುವ ರೈತರ ಸಾಲವನ್ನು ಯಾವ ಪ್ರಮಾಣದಲ್ಲಿ: ವಿಧಿಸಿರುವ ಷರತ್ತುಗಳೇನು? (ಸಂಪೂರ್ಣ ಮಾಹಿತಿ ಒದಗಿಸುವುದು).</td><td>2018-19 ನೇ ಸಾಲಿನಲ್ಲಿ ಸಹಕಾರ ಸಂಘಗಳಲ್ಲಿನ ರೈತರ ರೂ.1.00 ಲಕ್ಷಗಳ ಸಾಲ ಮನ್ನಾ ಮಾಡಿದ್ದು, ಅಂದಾಜು 20.38 ಲಕ್ಷ ರೈತರು ರೂ.9448.61 ಕೋಟಿಗಳ ಲಾಭ ಪಡೆಯಲಿದ್ದಾರೆ. ಈ ಯೋಜನೆಯ ಷರತ್ತುಗಳು ಈ ಕೆಳಕಂಡಂತೆ ಇರುತ್ತವೆ.<br>1. ಸಹಕಾರ ಸಂಘಗಳಲ್ಲಿ ಅಂದರೆ ಪ್ಯಾಕ್ಸ್, ಡಿಸಿಸಿ ಬ್ಯಾಂಕಿನ ಶಾಖೆಗಳು ಮತ್ತು ಪಿಕಾರ್ಡ್ ಬ್ಯಾಂಕುಗಳಲ್ಲಿ ರೈತರು ಬೆಳೆ ಸಾಲ ಪಡೆದು ದಿ.10-7-2018 ಕ್ಕೆ ಹೊರಬಾಕಿ ಹೊಂದಿರಬೇಕು.<br>2. ಕುಟಂಬಕ್ಕೆ ಗರಿಷ್ಠ ರೂ.1 ಲಕ್ಷಗಳ ವರೆಗೆ ಸಾಲ ಮನ್ನಾ ದೊರೆಯುತ್ತದೆ.</td></tr>
</table>

| | | |
|---|---|---|
| | | 3. ಸಾಲ ಮನ್ನಾ ಸೌಲಭ್ಯವು ರೈತರು ಮರುಪಾವತಿ ಮಾಡಬೇಕಾದ ಗಡುವಿನ ದಿನಾಂಕಕ್ಕೆ ಜಾರಿಗೆ ಬರುತ್ತದೆ.<br>4. ಕುಟುಂಬದಲ್ಲಿ ಯಾವುದೇ ಸದಸ್ಯನು ರೂ.20000/ ಕ್ಕಿಂತ ಹೆಚ್ಚಿನ ವೇತನ/ಪಿಂಚಣಿ ಪಡೆಯುತ್ತಿದ್ದಲ್ಲಿ ಅಥವಾ ಕಳೆದ ಮೂರು ವರ್ಷಗಳಲ್ಲಿ ಆದಾಯ ತೆರಿಗೆ ಪಾವತಿಸಿದಲ್ಲಿ ಅಂತಹ ರೈತರಿಗೆ ಈ ಸೌಲಭ್ಯ ದೊರೆಯುವುದಿಲ್ಲ.<br>5. ದಿ.10-7-2018 ಕ್ಕೆ ಸಾಲವು ಚಾಲ್ತಿ ಇದ್ದು, ರೂ 1 ಲಕ್ಷಕ್ಕಿಂತ ಹೆಚ್ಚಿಗೆ ಇದ್ದಲ್ಲಿ ಹೆಚ್ಚಿನ ಮೊತ್ತವನ್ನು ಗಡುವು ದಿನಾಂಕದೊಳಗೆ ಮರುಪಾವತಿಸಬೇಕು.<br>6. ದಿ.10-7-2018 ಕ್ಕೆ ಸಾಲವು ಸುಸ್ತಿ ಇದ್ದಲ್ಲಿ ಮಾರುಪಾವತಿ ದಿನಾಂಕದವರೆಗಿನ ಬಡ್ಡಿಯನ್ನು ಮತ್ತು ರೂ 1 ಲಕ್ಷಕ್ಕಿಂತ ಹೆಚ್ಚಿನ ಮೊತ್ತವನ್ನು ದಿ.31-3-2019 ರೊಳಗೆ ಮರುಪಾವತಿಸಬೇಕು.<br>7. ಸಹಕಾರ ಸಂಘಗಳಲ್ಲಿ ಸಾಲ ಮನ್ನಾ ಸೌಲಭ್ಯ ಪಡೆದ ರೈತರಿಗೆ ವಾಣಿಜ್ಯ ಬ್ಯಾಂಕಿನಲ್ಲಿ ಸಾಲ ಮನ್ನಾ ಸೌಲಭ್ಯ ದೊರೆಯುವುದಿಲ್ಲ. |
| ಈ) | ಸಹಕಾರಿ ವ್ಯವಸ್ಥೆಯು ರೈತರ ನಡುವೆ ಫಲಪ್ರದವಾಗಿ ಅವರ ಜೀವನ ಮಟ್ಟ ಸುಧಾರಿಸಲು ಸರ್ಕಾರದ ವಿಶೇಷ ಯೋಜನೆಗಳೇನು ? | ಸಹಕಾರ ಸಂಘಗಳ ಮೂಲಕ ರೈತರಿಗೆ ಈ ಕೆಳಕಂಡ ವಿಶೇಷ ಯೋಜನೆಗಳು ಇರುತ್ತವೆ.<br>1. ಶೂನ್ಯ ಬಡ್ಡಿ ದರಲ್ಲಿ ಬೆಳೆ ಸಾಲ ನೀಡುವ ಯೋಜನೆ<br>ರಾಜ್ಯದ ರೈತರು ಕೃಷಿ ಚಟುವಟಿಕೆ ಕೈಗೊಳ್ಳಲು ಅನುಕೂಲವಾಗುವಂತೆ ರೂ.3.00 ಲಕ್ಷಗಳವರೆಗೆ ಅಲ್ಪಾವಧಿ ಕೃಷಿ ಸಾಲವನ್ನು ಶೂನ್ಯ ಬಡ್ಡಿದರದಲ್ಲಿ ನೀಡಲಾಗುತ್ತದೆ.<br>2. ಶೇ.3 ರ ಬಡ್ಡಿ ದರದಲ್ಲಿ ಮಧ್ಯಮಾವಧಿ ಮತ್ತು ದೀರ್ಘಾವಧಿ ಕೃಷಿ ಸಾಲ ನೀಡುವ ಯೋಜನೆ<br>ರಾಜ್ಯದ ರೈತರಿಗೆ ರೂ.10.00 ಲಕ್ಷಗಳವರೆಗೆ ಮಧ್ಯಮಾವಧಿ ಕೃಷಿ ಸಾಲವನ್ನು ಶೇಕಡ 3ರ ಬಡ್ಡಿದರದಲ್ಲಿ ನೀಡಲಾಗುತ್ತದೆ.<br>3. ಸಹಕಾರ ಸಂಘಗಳಲ್ಲಿ ಸದಸ್ಯತ್ವಕ್ಕಾಗಿ ಶೇರು ಸಹಾಯಧನ<br>ಸಹಕಾರ ಸಂಘಗಳಲ್ಲಿ ರೈತರು ಸದಸ್ಯತ್ವ ಪಡೆಯಲು ಸರ್ಕಾರದಿಂದ ಶೇರು ಧನವನ್ನು ಭರಿಸಲಾಗುತ್ತದೆ.<br>4. ಇದಲ್ಲದೇ ಕೆಲವು ಸಹಕಾರ ಸಂಘಗಳ ಮೂಲಕ ಬೆಂಬಲ ಬೆಲೆ ಯೋಜನೆಯಲ್ಲಿ ಕೃಷಿ ಉತ್ಪನ್ನಗಳನ್ನು ಖರೀದಿಸಲಾಗುತ್ತದೆ.<br>5. ಸಹಕಾರ ಸಂಘಗಳ ಮೂಲಕ ಖರೀದಿಸುವ ಪ್ರತೀ ಲೀಟರ್ ಹಾಲಿಗೆ ಪ್ರೋತ್ಸಾಹ ಧನವನ್ನು ನೀಡಲಾಗುತ್ತದೆ. |

ಸಿಓ 313 ಸಿಎಲ್‌ಎಸ್ 2018

(ಬಂಡೆಪ್ಪ ಖಾಶೆಂಪೂರ)
ಸಹಕಾರ ಸಚಿವರು